# ಶ್ರೀ ಅನಂತಪದ್ಮನಾಭದೇವರು
# ( ಶ್ರೀವೈಕುಂಠವಾಸುದೇವರು )

ಪಲ್ಲವಿನಾಗರಾಜು ಹಾವೇರಿ., ಬೆಂಗಳೂರು – 99010 52578

ಶ್ರೀ ಶಾಲಿವಾಹನ ಶಕೆ 1932 ಶ್ರೀ ವಿಕೃತಿನಾಮ ಸಂವತ್ಸರ ದಕ್ಷಿಣಾಯನ ವರ್ಷಋತು ಭಾದ್ರಪದ ಶುದ್ಧ ಚತುರ್ದಶೀ ದಿನಾಂಕ : 22.09.2010

ಬುಧವಾರ ಶ್ರೀಅನಂತಚತುರ್ದಶೀ ಅಂಗವಾಗಿ

ಭಾವಿಸಮೀರರಾದ ಶ್ರೀವಾದಿರಾಜತೀರ್ಥ

ಕೃತ ತೀರ್ಥಪ್ರಬಂಧದಲ್ಲಿ ಹೇಳಿರುವ

## ಶ್ರೀಅನಂತಪದ್ಮನಾಭನ ಮಹಿಮಾ

ವಿಶೇಷ ಲೇಖನ.

ಅನಂತಪುರನಾಥ ತೇ ಪದಸುಪದ್ಮಸೇವೀ ಜನೋ
ಭವೇದ್ವಿಜಿತದುರ್ಜನೋ ದುರಿತತರ್ಜನಃ ಸಜ್ಜನಃ ।
ಉಪೈತಿ ಚ ಪರಾಂ ಗತಿಂ ಸತತ ಮುನ್ನತಿಂ ಸನ್ನತಿಂ
ಭವಘ್ನ ಸ ಪುನರ್ಭವೀ ಪರಿಭವೀ ಕಥಂ ಸ್ಯಾದ್ಭವಾನ್ ॥

ಶ್ರೀವಾದಿರಾಜಗುರುಸಾರ್ವಭೌಮರು., ಸರಸಭಾರತೀವಿಲಾಸ

# ಪ್ರಾಸ್ತಾವಿಕ

ತತಃ ಕ್ರಮೇಣ ಪ್ರಚಲನ್ನುಪೇಯಿವಾನವಂದತೇಂದೀವರಸುಂದರಚ್ಛವಿಮ್ ।
ಅಂಭೋಜನಾಭಂ ಸ ಭುಜಂಗಶಾಯಿನಂ ಶ್ರೀವಲ್ಲಭಂ ಶ್ರೀಮದನಂತಸತ್ಪುರೇ ॥

ಭಾದ್ರಪದ ಮಾಸ ಎಂದರೇ ಹಬ್ಬಗಳ ಮಾಸವೆಂದು, ಅಲ್ಲದೇ ಭಾದ್ರಪದ ಮಾಸಕ್ಕೆ ಪ್ರೋಷ್ಠಪದ ಮಾಸವೆಂತಲು ಶಾಸ್ತ್ರಕಾರರು ಹೇಳುವುದುಂಟು. ಕಾರಣ ನಮ್ಮ ಶಬ್ಧಗಳು ಭದ್ರವಾಗಿ ಇರುವಂತೆ ಮಾಡಿ ಸುಭದ್ರವಾದ ಮೋಕ್ಷವನ್ನು ಕರುಣಿಸುವಂಥಾ ಸಕಲ ಶಬ್ಧವಾಚ್ಯನಾದ ಭವಂತನ ಮತ್ತೂ ಭಗವದ್ಭಕ್ತರ ಕಥೆಗಳನ್ನೊಳಗೊಂಡ ಶ್ರೀಮದ್ಭಾಗವತದ ಪದಗಳು ನಮ್ಮ ನಲಿಗೆಯಲ್ಲಿ ಸದಾಕಾಲ ಸುಭದ್ರವಾಗಿ ಸುಲಲಿತವಾಗಿ ಗಂಗಾ ಪ್ರವಾಹದಂತೆ ಹರಿಯುವಂತೆ ಮಾಡಿ ಮೋಕ್ಷಪಥವನ್ನು ತೋರಿಸುವ ಮಾಸ ಭಾದ್ರಪದ ಮಾಸ ಅಥವಾ ಪ್ರೋಷ್ಠಪದಿ ಮಾಸ ಎಂದು ಹೆಸರು. ಇಂತಹಾ ಶ್ರೇಷ್ಠವಾದ ಭಾದ್ರಪದ ಮಾಸದಲ್ಲಿ ಸಾಕ್ಷಾತ್ ವೈಕುಂಠವಾಸುದೇವನಾದ ಅನಂತಪದ್ಮನಾಭನ ರೂಪದಲ್ಲಿ ಬಂದು ಎಲ್ಲಾ ಭಕ್ತರಿಗೂ ದರ್ಶನವನ್ನು ನೀಡುತ್ತಿರುವ ಶುಭ ಸಂದರ್ಭದಲ್ಲಿ ಸಕರಿಗೂ ಸನ್ಮಂಗಲವನ್ನುಂಟು ಮಾಡಲೆಂದು ಪ್ರಾರ್ಥಿಸುತ್ತಾ............

**ಶೇಷೇ ಶಯಾನ ಶರದಿಂದುಸಮವಕ್ತ್ರ**
**ಶ್ರೀಶಾದಿಕೇಶವ ಸಿತೋದಕಜಾತನೇತ್ರ ।**
**ದೋಷಾತಿದೂರ ಗತಪಾರ ಗುಣಾಂಬುರಾಶೇ**
**ದಾಸೇ ದಯಾಂ ಕುರು ಮಯೀಶ ಗತೇತರಾಶೇ ॥**

ಶೇಷಶಾಯಿಯೂ, ಶರಚ್ಚಂದ್ರನಂತಾ ಮುಖವುಳ್ಳವನೂ, ಲಕ್ಷ್ಮೀಪತಿಯೂ, ಪುಂದರೀಕಾಕ್ಷನೂ, ದೂಷರಹಿತನೂ, ಪಾಪರಹಿತನೂ, ಗುಣಪೂರ್ಣನೂ, ಸರ್ವೋತ್ತಮನೂ ಆದ ಆದಿಕೇಶವನನ್ನು ದಾಸನಾದ ನನ್ನ ಮೇಲೆ ದಯೆತೋರು ಎಂದು ಶ್ರೀವಾದಿರಾಜಗುರುಸಾರ್ವಭೌಮರು ಪ್ರಾರ್ಥಿಸಿದ್ದಾರೆ.

**ಶ್ರೀಭೂಭ್ಯಾಂ ಕೃತಪಾದಸೇವನಮನರ್ಘ್ಯೋರುಸ್ಫುರದ್ಭೂಷಣಂ**
**ಶೇಷಾಂಗೇ ಸತತಂ ಶಯಾನಮುದರಪ್ರೋದ್ಭಾಸಿಪದ್ಮಂ ಪ್ರಭುಮ್ ।**
**ಧಾತ್ರಾ ಸ್ತೋತ್ರಚಯೈಃ ಸ್ತುತಂ ಫಣಿಫಣೈಕೃತ್ರೋಷಮೈರ್ಮಂಡಿತಂ**
**ಸೇವೇಽನಂತಪುರೇಶ್ವರಂ ಮುನಿವರಪ್ರೇಮಾಕರಂ ಶ್ರೀಕರಮ್ ॥**

ಶೇಷಶಾಯಿಯಾದ ಅನಂತಪದ್ಮನಾಭನ ಪಾದಕಮಲಗಳನ್ನು ಶ್ರೀದೇವಿ ಭೂದೇವಿಯರು ಸೇವಿಸುತ್ತಿರುವರು. ಮೂರ್ತಿಯು ಅನರ್ಘ್ಯವೂ, ತುಂಬಾ ಉಜ್ವಲವೂ ಆದ ಆಭರಣಗಳಿಂದ ಅಲಂಕೃತವಾಗಿದೆ. ವಿಗ್ರಹದ ನಾಭಿಕಮಲಗಳಿಂದ ಚಿಮ್ಮುತ್ತಿರುವ ಕಮಲದ ಮೇಲೆ ಕಂಗೊಳಿಸುತ್ತಿರುವ ಬ್ರಹ್ಮದೇವರು ವಿವಿಧ ಸ್ತೋತ್ರಗಳಿಂದ ಅನಂತಪದ್ಮನಾಭನನ್ನು ಸ್ತುತಿಸುತ್ತಿರುವರು. ಛತ್ರದಂತಿರುವ ಮೇಲೆ ಹೆಡೆಗಳಿಂದ ಭೂಷಿತವಾಗಿದೆ. ಕೌಂಡಿಣ್ಯಾದಿಮುನಿಶ್ರೇಷ್ಠರ ಭಕ್ತಿಗೆ ವಿಷಯನಾದ ಸಂಪತ್ಕರನಾದ ಈ ಅನಂತಪದ್ಮನಾಭನನ್ನು ಸೇವಿಸುವೆನು.

**ಕಿಂ ಲೋಕಾತ್ಮಕಪದ್ಮಕಂಪನಭಿಯಾ ಪುತ್ರಪ್ರಿಯೇಣಾಥವಾ**
**ನಾಗಾಗ್ರೇಸರಭೋಗಸೌಭಗಕೃತಸ್ನೇಹೇನವಾಽಹರ್ನಿಶಮ್ ।**
**ಕಿಂ ವಾ ಶ್ರೀಶ ನಿಜಾರ್ಪಿತೋರುವಿಧಸುಸ್ವಾದ್ವೋದನಾಸ್ವಾದನಾ–**
**ಚ್ಚೇಷೇಽನಂತಪುರೇಶ ಶೇಷವಪುಷಿ ಶ್ರೀಸೇವಯಾವಾಽಗ್ರ್ಯಯಾ ॥**

ಎಲೈ ಅನಂತಶಯನನೇ ! ನೀನು ಹಗಲಿರುಳೂ ಹೀಗೆ ಶೇಷನ ಮೇಲೆ ಮಲಗಿರುವುದು ನಿನ್ನ ಕಮಲರೂಪದಲ್ಲಿ ನಿನ್ನ ನಾಭಿಯಲ್ಲಿರುವ ಲೋಕಗಳು ನಡುಗಿ ಕಂಪಿಸಿಯಾವು ಎಂದೋ ಅಥವಾ ನಾಭಿಕಮಲದಲ್ಲಿ ಕುಳಿತಿರುವ ಪುತ್ರನಾದ ಬ್ರಹ್ಮದೇವರ ಮೇಲಿನ ಪ್ರೀತಿಯಿಂದಲೋ ಅಥವಾ ಸರ್ಪರಾಜನಾದ ಶೇಷನ ಶರೀರದ ಸೌಕುಮಾರ್ಯದ ಮೇಲಿನ ಸ್ನೇಹದಿಂದಲೋ ಅಥವಾ ನಿನ್ನ ಭಕ್ತರು ನಿವೇದಿಸಿರುವ ಉತ್ತಮವಾದ ನಾನಾತೆರನಾದ ಸವಿಯಾದ ಅನ್ನವನ್ನು ಭೋಜನ ಮಾಡುವುದರಿಂದಲೋ ಅಥವಾ ಮಹಾಲಕ್ಷ್ಮೀಯು ಮಾಡುತ್ತಿರುವ ಉನ್ನತವಾದ ಸೇವೆಯಿಂದಲೋ?

ಶ್ರೀಹರಿಯ ನಾಭಿಯನ್ನಾಶ್ರಯಿಸಿ ಕಮಲರೂಪಗಳಲ್ಲಿ 14 ಲೋಕಗಳಿವೆ. ನಾಭಿಕಮಲದಲ್ಲಿ ಲೋಕಸೃಷ್ಟಿಕರ್ತೃಗಳಾದ ಬ್ರಹ್ಮದೇವರಿರುವರು. ಹಾಸಿಗೆಯ ರೂಪದಲ್ಲಿ ಸರ್ಪರಾಜನಾದ ಶೇಷದೇವರು ಇರುವರು. ಬ್ರಹ್ಮದೇವರೇ ಮೊದಲಾದವರು ಸಕಲ ವಿಧವಾದ ಚಿತ್ರವಿಚಿತ್ರವಾದ ಅನ್ನವನ್ನು ನೈವೇದ್ಯ ಮಾಡುವರು. ಮಹಾಲಕ್ಷ್ಮೀಯೂ ಸತತವೂ ಉತ್ತಮ ರೀತಿಯಲ್ಲಿ ಪಾದಸೇವಾದಿಗಳನ್ನು ಸಲ್ಲಿಸುತ್ತಿರುವರು. ಹೀಗೆ ಬ್ರಹ್ಮರುದ್ರಾದಿ ಸೇವಿತನೂ, ಸಕಲಲೋಕಾಶ್ರಯನೂ ಆಗಿರುವ ಶ್ರೀಹರಿಯು ಸರ್ವೋತ್ತಮನೆಂದು ಭಾವ.

ಲೋಕವಾತ್ಸಲ್ಯ, ಪುತ್ರಪ್ರೇಮ, ಉತ್ತಮಶಯನ, ಸವಿಯಾದ ಭೋಜನ, ಪತ್ನಿಯ ಉಪಚಾರಗಳು ಎಂಬುದಾಗಿ ಲೋಕದಲ್ಲಿ ಪ್ರಸಿದ್ಧವಾಗಿರುವ ನಿದ್ರೆಯ ಸಕಲ ಕಾರಣಗಳೂ ಶ್ರೀಹರಿಯ ಸರ್ವೋತ್ತಮತ್ವಕ್ಕೆ ಸಾಧಕ ಎಂದರ್ಥ. ನಾಭಿಕಮಲರೂಪದ ಲೋಕಗಳು, ಕಮಲದ ಮೇಲೆ ಕುಳಿತಿರುವ ಬ್ರಹ್ಮದೇವರು, ಹಾಸಿಗೆಯಾಗಿರುವ ಶೇಷದೇವರು, ಭಕ್ತರು ಸಮರ್ಪಿಸುವ ವಿವಿಧ ಮೃಷ್ಟಾನ್ನಗಳು ಮತ್ತು ಪತ್ನಿಯಾದ ಮಹಾಲಕ್ಷ್ಮೀ ಮೊದಲಾದ ಸಕಲವೂ ಶ್ರೀಹರಿಯ ನಿದ್ರಾರಾಹಿತ್ಯಕ್ಕೂ ಅದರಿಂದ ಉಪಲಕ್ಷಿತವಾದ ಸಕಲ ದೋಷಗಳ ಅಭಾವಕ್ಕೂ ದ್ಯೋತಕ. ಶ್ರೀಹರಿಯು ನಿದ್ರಾದಿ ಸಕಲ ದೋಷರಹಿತನು ಎಂದು ಮುಖ್ಯತಾತ್ಪರ್ಯ.

**ತ್ರೀಣಿ ತ್ರಯ ಪರಿಜಗಾದ ಯದಾತ್ಮದೃಷ್ಟಿ**
**ದ್ವಾರಾಣಿ ಚಾರುತರಶೀಲನರೋಚಿತಾನಿ ।**
**ಪ್ರತ್ಯಕ್ಷಮೇತದನುಭಾವಯತಿ ಪ್ರಮೇಯಂ**
**ಪ್ರೌಢಪ್ರಜಾಃ ಪ್ರಭುರನಂತಪುರೇಽಬ್ಜನಾಥಃ ॥**

ತಿರುವನಂತಪುರದಲ್ಲಿ ಅನಂತಪದ್ಮನಾಭಮೂರ್ತಿಯು ತುಂಬಾ ದೊಡ್ಡದಾಗಿದ್ದು ಗರ್ಭಗುಡಿಯಲ್ಲಿರುವ ಮೂರುಬಾಗಿಲುಗಳಿಂದ ಕ್ರಮವಾಗಿ ಮೂರ್ತಿಯ ಮುಖ, ಮಧ್ಯ ಮತ್ತು ಪಾದಗಳನ್ನು ದರ್ಶನ ಮಾಡಬೇಕು. ಅನಂತಶಯನಮೂರ್ತಿಯನ್ನು ದ್ವಾರತ್ರಯಗಳಿಂದ ದರ್ಶನ ಮಾಡುವಾಗ ಶ್ರವಣ, ಮನನ ಮತ್ತು ಧ್ಯಾನಗಳು ಪರಮಾತ್ಮನ ಸಾಕ್ಷಾತ್ಕಾರಕ್ಕೆ ಸಾಧನತ್ರಯವಾಗಿವೆ ಎಂದು ಅರ್ಥ.

**ಯಾ ತೈತ್ತಿರೀಯನಿಗಮಾಂತಗಕಿಂವದಂತೀ**
**ಸೇವಾತ್ರಯೋಚಿತಫಲತ್ರಿತಿಯಂ ವದಂತೀ ।**
**ತತ್ರತ್ಯ ಸಂಶಯಮಪಾಕುರುತೇಽಂಘ್ರಿಮಧ್ಯ-**
**ವಕ್ತ್ರಂ ಕ್ರಮೇಣ ಘಟಯನ್ನೃಶೀ ಪದ್ಮನಾಭಃ ॥**

ತೈತ್ತಿರೀಯ ಶೃತಿಯಲ್ಲಿ ಪರಮಾತ್ಮನ ಪಾದ, ಮಧ್ಯ ಮತ್ತು ಮುಖಗಳನ್ನು ಉಪಾಸನೆ ಮಾಡುವವರಿಗೆ ಮೋಕ್ಷದಲ್ಲಿ ಪಾದಾದಿಗಳ ದರ್ಶನವೇ ಫಲ ಎಂಬುದಾಗಿ ಉಕ್ತವಾಗಿದೆ. ತಿರುವನಂತಪುರದಲ್ಲಿ ಪಾದಾದಿಗಳನ್ನು ತೋರುವ ದ್ವಾರದಲ್ಲಿ ನಿಂತವರಿಗೆ ಪಾದಾದಿಗಳು ಮಾತ್ರವೇ ಕಾಣುತ್ತವೆ. ಯಾವ ದ್ವಾರದಿಂದಲೂ ಸಮಗ್ರವಾದ ಮೂರ್ತಿಯು ಗೋಚರಿಸುವುದಿಲ್ಲ. ಹೀಗೆ ಅನಂತಪದ್ಮನಾಭನ ಪಾದದಿಗಳನ್ನು ದರ್ಶನ ಮಾಡುವಾಗ ತೈತ್ತಿರೀಯ ಶೃತಿಯಲ್ಲಿ ಹೇಳಿದ ಆಯಾ ಅವಯವ ಉಪಾಸನೆಗೆ ಆಯಾ ಅವಯವಗಳ ದರ್ಶನ ಮಾತ್ರವೇ ಫಲ ಎಂಬ ವಿಷಯದಲ್ಲಿ ಹುಟ್ಟುವ ಆ ಸಂಶಯವು ಪರಿಹಾರವಾಗಿಬಿಡುತ್ತದೆ. **ಅನಂತ ಎಂಬುದಕ್ಕೆ ದೇಶತಃ ಕಾಲತಃ ಗುಣತಃ ಅನಂತ** ಎಂದು ಅರ್ಥ. ಶ್ರೀಹರಿಯು ತತ್ತ್ವಬೋಧಕ ಮತ್ತು ಸಂಶಯಾದಿ ನಿವರ್ತಕ ಎಂಬ ಪ್ರಮೇಯವೂ ಇಲ್ಲಿ ಅಡಗಿದೆ.

**ಪಾಸ್ಯನಂತಪುರೇಶ ತ್ವಮಶೇಷಂ ಶೇಷಶಾಯ್ಯಪಿ ।**
**ತಥಾ ಹಿ ಕರುಣಾವಂತಃ ಪರಕಾರ್ಯಧುರಂಧರಾಃ ॥**

ಮಲಗುವುದು ಅನುತ್ಸಾಹದ ಸಂಕೇತ. ಆದರೆ ಶ್ರೀಹರಿಯು ಶೇಷನ ಮೇಲೆ ಮಲಗಿಯೂ ಅಶೇಷ ಜಗತ್ತನ್ನು ಪಾಲಿಸುತ್ತಿರುವನು. ಹೀಗೆ ಪರಕಾರ್ಯವನ್ನು ಸದಾ ಮಾಡುವುದು ಕರುಣಾಳುಗಳಾದವರ ಸ್ವಭಾವವೇ ಆಗಿದೆ. ಶ್ರೀಹರಿಗೆ ನಿದ್ರಾದಿ ದೋಷಗಳಿಲ್ಲ. ಶ್ರೀಹರಿಯು ಸರ್ವದಾ ಸರ್ವಕಾಲಗಳಲ್ಲಿಯೂ ಸಕಲ ಜೀವಿಗಳ ರಕ್ಷಣೆ ಮಾಡುತ್ತಿರುವನು ಎಂದು ಅರ್ಥ.

**ಯಥಾ ಗುಹಾಮುಖೇ ನಾಥ ಶೇಷೇ ಶೇಷೇ ರಮಾಪತೇ ।**
**ತಥಾ ಹಾರ್ದಗುಹಾಮಧ್ಯಮಧ್ಯಾಸೀನೋ ರಮಸ್ವಮೇ ॥**

ಎಲೈ ಅನಂತಶಯನನೇ ! ನೀನು ಗುಹೆಯ ದ್ವಾರದಲ್ಲಿ ಶೇಷನ ಮೇಲೆ ನೆಲೆಸಿರುವಂತೆ ಸದಾ ನನ್ನ ಗುಹೆಯಲ್ಲಿ ನೆಲಿಸಿ ಕ್ರೀಡಿಸು. ಅನಂತಶಯನನು " ಹೃದಯಗೃಹಾಯಂ ರಮಣಸ್ಯ ಉಚಿತತ್ವದಿತಿ ಭಾವಃ । ಅನಂತಶಯನಃ ಗುಹಾದ್ವಾರೇ ವಸತೀತಿ ಪುರಾಣಪ್ರಸಿದ್ಧಿಃ ॥ " ಎಂಬ ಪುರಾಣ ವಚನವನ್ನನುಸರಿಸಿ ಶ್ರೀವಾದಿರಾಜ ಗುರುಸಾರ್ವಭೌಮರು ಶ್ರೀಅನಂತಪದ್ಮನಾಭದೇವರನ್ನು ಪ್ರಾರ್ಥಿಸಿದ್ದಾರೆ.

**ಸುರಗಣಪರಿವಾರಃ ಶೋಭಮಾನೋರುಹಾರಃ**
**ಕರಿಕರಸಮಹಸ್ತಃ ಕಾಂಚನೋದ್ದೀಪ್ತವಸ್ತ್ರಃ ॥**
**ಶುಭಜನಕೃತಗಾನಃ ಶೇಷಭೋಗೇಶಯಾನಃ**
**ಪ್ರಭುರಯಮವಿನಾಶಃ ಪ್ರೀಯತಾಮಿಂದಿರೇಶಃ ॥**

ಶ್ರೀಹರಿಯ ಸರ್ವೋತ್ತಮತ್ವ, ಸಕಲ ಸಲ್ಲಕ್ಷಣೋಪೇತತ್ತ್ವ, ದಿವ್ಯವಸ್ತ್ರಧಾರಿತ್ವ, ಸಜ್ಜನವಂದ್ಯತ್ವ, ಶೇಷಶಾಯಿತ್ವ, ಚತುರ್ವಿಧನಾಶರಹಿತತ್ತ್ವ, ಲಕ್ಷ್ಮೀಪತಿತ್ವ ಎಂಬ ಹಿರಿಮೆಗಳು ಪ್ರತಿಪಾದಿತವಾಗಿದೆ. ಇಂತಹಾ ಮಹಾಮಹಿಮೋಪೇತನಾಗಿರುವುದರಿಂದ ಸರ್ವೋತ್ತಮನಾದ ಶ್ರೀಹರಿಯು ಈ ಕೃತಿಯಿಂದ ಪ್ರೀತನಾಗಲಿ ಎಂದು ಶ್ರೀವಾದಿರಾಜಗುರುಸಾರ್ವಭೌಮರು ಪ್ರಾರ್ಥಿಸಿದ್ದಾರೆ.

ತಾವು ರಚಿಸಿದ ತೀರ್ಥಪ್ರಬಂಧ ಕೃತಿಯನ್ನು ಶ್ರೀವಾದಿರಾಜ ಗುರುಸಾರ್ವಭೌಮರು ಈ ಶ್ಲೋಕದಿಂದ ಶ್ರೀಮದನಂತಪದ್ಮನಾಭರೂಪೀ ಶ್ರೀಹರಿಗೆ ಸಮರ್ಪಿಸಿದ್ದಾರೆ.